**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 27.03.2026:**

**ಪ್ರತಿವಾದಿ ಪರವಾಗಿ ಪಾಟೀ ಸವಾಲುಃ**

ಪ್ರತಿವಾದಿ ಪಂಚಾಯಿತಿಗೆ ಸಾಲವಾಗಿ ಸಾಮಾಗ್ರಿಗಳನ್ನು ವಿತರಿಸಲು ಪ್ರತಿವಾದಿಯ ಮೇಲಾಧಿಕಾರಿಗಳಿಂದ ಆದೇಶ ಇರಲಿಲ್ಲ. ಪಂಚಾಯಿತಿಯಲ್ಲಿ ಸಭೆ ನಡೆಸಿ ನಮಗೆ ಹಣ ಕೊಡುತ್ತಾರೆ ಎಂದು ಹೇಳಿದ ಬಗ್ಗೆ ನನಗೆ ಯಾವುದೇ ದಾಖಲೆ ಗೊತ್ತಿಲ್ಲ. ಸರ್ಕಾರಿ ಇಲಾಖೆಗೆ ಸಾಲವಾಗಿ ಸಾಮಾಗ್ರಿಗಳನ್ನು ನೀಡಬೇಕಾದರೆ ಅದಕ್ಕೆ ಲಿಖಿತವಾಗಿ ಗ್ರಾಮ ಪಂಚಾಯಿತಿ ಮೇಲಾಧಿಕಾರಿಗಳಿಂದ ಅನುಮತಿ ಪಡೆಯಬೇಕಾಗುತ್ತದೆ ಎಂದರೆ ನನಗೆ ಗೊತ್ತಿಲ್ಲ.

2020ರಲ್ಲಿ ಇದ್ದ ಪಿಡಿಓರವರ ಹೆಸರು ಮಲ್ಲೇಗೌಡ. ಅಧ್ಯಕ್ಷರ ಹೆಸರು ಹರ್ಷ. ಈ ದಾವೆ ಹಾಕುವ ಸಂದರ್ಭದಲ್ಲಿ ಪಿಡಿಓ ಮತ್ತು ಅಧ್ಯಕ್ಷರು ಬದಲಾಗಿದ್ದರು ಎಂದರೆ ಸರಿ. ನಿಪಿ.1ರಲ್ಲಿ ಸಾಲವಾಗಿ ಸಾಮಾಗ್ರಿಗಳನ್ನು ಕೊಡಿ  ಎಷ್ಟು ಮೌಲ್ಯ ಸಾಮಾಗ್ರಿ ಕೊಡಿ ಎಂದು ಇತ್ಯಾದಿಯನ್ನು ತೋರಿಸಿಲ್ಲ ಎಂದರೆ ಸರಿ.  ನಿಪಿ.1ಕ್ಕೆ ಪೂರಕವಾಗಿ ಬಿಲ್ಲು ಕಳುಹಿಸಿರುತ್ತೇನೆ. ಆ ಬಿಲಕ್ಲಿನಂ ಮೇಲೆ ಪ್ರತಿವಾದಿಗಳು ಹಣವನ್ನು ನಂತರ ಕಳುಹಿಸುತ್ತೇನೆ, ಸಾಮಾಗ್ರಿ ಸಾಲವಾಗಿ ಕೊಡಿ ಎಂದು ಬರೆಯಲಿಲ್ಲ.

(ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ನ್ಯಾಯಾಧೀಶರು,**

**ಹಾಸನ.**